47) ಕಣ್ಣೂರು
48) ಚಿಕ್ಕಮಾಲಪುರ ಚಿಕ್ಕಮಾಲಪುರ ಉಪ ಕೇಂದ್ರದಲ್ಲಿ ಎ ಎನ್ ಎಂ ಹುದ್ದೆ ಖಾಲಿ ಇದೆ

655 (701) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹನೂರಿನಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವಂತೆ ಹಲವಾರು ವರ್ಷಗಳಿಂದ ಕೋರಿಕೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಈವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು ,

ಇ) ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಇರುವ ತೊಂದರೆಗಳೇನು ,

ಈ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು ಯಾವಾಗ ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಬಂದಿದ

ಆ) ಬಂದಿರುವ ಪ್ರಸ್ತಾವನೆಯನ್ನು ಮಾರ್ಗಸೂಚಿ ಪ್ರಕಾರ ಪರೀಶೀಲಿಸಲಾಗುವುದು

656 (702) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಚಾಮರಾಜನಗರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ,

ಆ) ಈ ಪೈಕಿ ಭರ್ತಿಯಾದ ಹುದ್ದೆಗಳೇಷ್ಟು ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ? (ಆಸ್ಪತ್ರೆವಾರು ವಿವರ ನೀಡುವುದು) ,

ಇ) ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ ,

ಈ) ಹಾಗಿದ್ದಲ್ಲಿ, ಖಾಲಿ ಯಿರುವ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) --

ಅ) ಚಾಮರಾಜನಗರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರ ಹುದ್ದೆಗಳ ಸಂಖ್ಯೆ 90)ಆಸ್ಪತ್ರೆವಾರು ವಿವರಗಳನ್ನು ಅನುಬಂದ–1ರಲ್ಲಿ ನೀಡಿದೆ)

ಆ) ಈ ಪೈಕಿ ಭರ್ತಿಯಾದ ಹುದ್ದೆಗಳ ಸಂಖ್ಯೆ 8 (ಆಸ್ಪತ್ರೆವಾರು ವಿವರಗಳನ್ನು